# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಯಲಹಂಕ, ಬೆಂಗಳೂರು.

ವಾರ್ಡ್ ನಂ:03, ಅಟ್ಟೂರ್‌ಗೆ ಸಂಬಂಧಿಸಿದಂತೆ ದಿನಾಂಕ:07/12/2020 ರಂದು ನಡೆದ ವಾರ್ಡ್ ಕಮಿಟಿ ಸಭೆಯ ಸಭಾ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 1 | ಶ್ರೀ.ಶಿವೇಗೌಡ | ಉಪ ಆಯುಕ್ತರು, ಆರ್.ಆರ್.ನಗರ (ನೋಡಲ್ ಆಫೀಸರ್) |
| 2 | ಶ್ರೀ.ಕೃಷ್ಣಪ್ಪ | ಸಹಾಯಕ ಅಭಿಯಂತರರು, ವಾರ್ಡ್ ಕಮಿಟಿ ಕಾರ್ಯದರ್ಶಿ |
| 3 | ಶ್ರೀ.ವಿನಾಯಕ.ಕೆ.ಎಂ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4 | ಶ್ರೀ.ಮಲ್ಯಾದ್ರಿ | ತೋಟಗಾರಿಕೆ ಇಲಾಖೆ, ಯಲಹಂಕ ವಲಯ, ಬಿ.ಬಿ.ಎಂ.ಪಿ |
| 5 | ಶ್ರೀ.ಲೋಕೇಶ್ | Ward No:03, ಘನತ್ಯಾಜ್ಯ ಗುತ್ತಿಗೆದಾರರು |

ದಿನಾಂಕ:07.12.2020 ರಂದು ಮಧ್ಯಾಹ್ನ 02.30 ಗಂಟೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ ಕಛೇರಿಯಲ್ಲಿ ವಾರ್ಡ್ ನಂ:03, ಅಟ್ಟೂರ್ ಸಂಬಂಧಿಸಿದ ನೋಡಲ್ ಅಧಿಕಾರಿಯಾದ ಶ್ರೀ.ಶಿವೇಗೌಡ ರವರು ವಾರ್ಡ್ ನಂ:03, ಅಟ್ಟೂರು ವ್ಯಾಪ್ತಿಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳೊಂದಿಗೆ ಹಾಗೂ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಡೆಸಿದ ಜಂಟಿ ಸಮನ್ವಯ ಸಮಿತಿಯ ಸಭೆಯ ನಡವಳಿಗಳು.

ಶ್ರೀ.ಕೃಷ್ಣಪ್ಪ, ಸಹಾಯಕ ಅಭಿಯಂತರರು ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ನಡೆದ ನಡುವಳಿಗಳನ್ನು ಓದಿ ಹಾಗೂ ತೆಗೆದುಕೊಂಡಿರುವ ಕ್ರಮದ ಬಗ್ಗೆ ಚರ್ಚಿಸಿ ಸಭೆಯನ್ನು ಪ್ರಾರಂಭ ಮಾಡಲಾಯಿತು.

1) ವಾರ್ಡ್ ನಂ:03 ರ ವ್ಯಾಪ್ತಿಯಲ್ಲಿ ಬರುವ ಸಂತೋಷ್‌ನಗರದ ನಿವಾಸಿಯಾದ ಶ್ರೀ.ಮಂಜುನಾಥ ರವರು 4ನೇ, 7ನೇ ಮತ್ತು 9ನೇ ಅಡ್ಡರಸ್ತೆಗಳಲ್ಲಿ ಚರಂಡಿಗಳನ್ನು ನಿರ್ಮಿಸಿರುವುದಿಲ್ಲ ಹಾಗೂ 6ನೇ ಮುಖ್ಯರಸ್ತೆಯಲ್ಲಿ ಬರುವ ಎಸ್.ಡಬ್ಲ್ಯೂ.ಡಿ. ಡ್ರೈನ್ ಮೇಲೆ ಡೆಕ್‌ಸ್ಲಾಬ್ ನಿರ್ಮಿಸಲು ಕೋರಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಂತೋಷ್‌ನಗರದ ವ್ಯಾಪ್ತಿಯಲ್ಲಿ ಉಳಿದಿರುವ ಎಲ್ಲಾ ಅಡ್ಡರಸ್ತೆಗಳಿಗೆ ಹಾಗೂ ಮುಖ್ಯರಸ್ತೆಗಳಿಗೆ ಚರಂಡಿ ಕಾಮಗಾರಿ ಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ 6ನೇ ಅಡ್ಡರಸ್ತೆಯಲ್ಲಿ ಬರುವ ಎಸ್.ಡಬ್ಲ್ಯೂ.ಡಿ ಡ್ರೈನ್ ಮೇಲೆ ಡೆಕ್‌ಸ್ಲಾಬ್ ಹಾಕುವುದರ ಬಗ್ಗೆ ಸಂಬಂಧಪಟ್ಟ ಅಭಿಯಂತರವರಿಂದ ಮಾಹಿತಿಯನ್ನು ಪಡೆದು ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

2) ಸಂತೋಷ್‌ನಗರದ ವ್ಯಾಪ್ತಿಯಲ್ಲಿ ಬರುವ ಕೆಲವು ಅಡ್ಡರಸ್ತೆಗಳಲ್ಲಿನ ಮನೆಗಳಿಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ನೀರು ಸರಬರಾಜು ಮಾಡುತ್ತಿಲ್ಲ ಎಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ಸಭೆಯಲ್ಲಿ ಕೆಲವು ಮನೆಯ ಮಾಲೀಕರು ಇಲ್ಲಿಯವರೆವಿಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಂಸ್ಥೆಗೆ ಪರಾಟೋ ಛಾರ್ಜಸ್‌ನ್ನು ಕಟ್ಟಿರುವುದಿಲ್ಲ.

ಆಧುದರಿಂದದ ಅಂತಹ ಮನೆಗಳಿಗೆ ತಾತ್ಕಾಲಿಕವಾಗಿ ನೀರು ಸಂಪರ್ಕವನ್ನು ನಿಲ್ಲಿಸಲಾಗಿದೆ. ಸದರಿಯವರು ಪರಾಟೋ ಛಾರ್ಜಸ್‌ನ್ನು ಕಟ್ಟಿದ ನಂತರ ಅಂತಹ ಮನೆಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

3) 707 ಬಡಾವಣೆಯ ನಿವಾಸಿಯಾದ ಶೇಷಾದ್ರಿಯವರು 707 ಬಡಾವಣೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಫುಟ್‌ಪಾತ್ ಮೇಲೆ ತಳ್ಳುವ ಗಾಡಿಗಳನ್ನು ಇಟ್ಟುಕೊಂಡಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಇದಕ್ಕೆ ಸಂಬಂಧಿಸಿದಂತೆ ವಾರ್ಡ್ ಅಭಿಯಂತರರವರು ಹಿರಿಯ ಆರೋಗ್ಯ ಪರಿವೀಕ್ಷಕರೊಂದಿಗೆ ಚರ್ಚಿಸಿ ಕೂಡಲೇ ಫುಟ್‌ಪಾತ್ ತೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

4) ಆಲ್ ಇಂಡಿಯಾ ರೇಡಿಯೋ ಪಕ್ಕ ಇರುವ ಪಾರ್ಕ್ ಡೆವಲಪ್‌ಮೆಂಟ್ ಮಾಡುವುದರ ಬಗ್ಗೆ ಹಾಗೂ ಯು.ಜಿ.ಡಿ.ಯ ನಿರ್ವಹಣೆಯ ಬಗ್ಗೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿದ್ದ ಬಿ.ಡಬ್ಲ್ಯು.ಎಸ್.ಎಸ್.ಬಿ ಅಭಿಯಂತರರು ಯು.ಜಿ.ಡಿ.ಯ ನಿರ್ವಹಣೆಯ ಬಗ್ಗೆ ಮಾಹಿತಿಯನ್ನು ನೀಡಿದರು ಹಾಗೂ ಆಲ್ ಇಂಡಿಯಾ ರೇಡಿಯೋ ಪಕ್ಕ ಇರುವ ಪಾರ್ಕ್ ಡೆವಲಪ್‌ಮೆಂಟ್ ಮಾಡುವುದರ ಬಗ್ಗೆ ಆರ್ಟಿಕಲ್ಚರ್ ವಿಭಾಗದ ಅಧಿಕಾರಿಯು ಸಭೆಯಲ್ಲಿ ಮಾಹಿತಿ ನೀಡಿದರು.

5) ಎಸ್.ಎಫ್.ಎಸ್ 707 ಬಡಾವಣೆಯ ನಿವಾಸಿಯಾದ ಶ್ರೀ.ವೆಂಕಟರಮಣ ರವರು ಸ್ಟ್ರೀಟ್‌ಲೈಟ್ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿಲ್ಲ ಎಂದು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಸ್ಟ್ರೀಟ್‌ಲೈಟ್ ನಿರ್ವಹಣಾ ವಿಭಾಗದವರಿಗೆ ಸರಿಯಾಗಿ ನಿರ್ವಹಿಸಲು ಸಭೆಯಲ್ಲಿ ಸೂಚನೆ ನೀಡಲಾಯಿತು.

6) ಎಸ್.ಎಫ್.ಎಸ್ 707 ಬಡಾವಣೆಯ ನಿವಾಸಿಯಾದ ಶ್ರೀ.ಸುಬ್ರಮಣಿ ನಾಯಕ್ ಬಡಾವಣೆಯ ವ್ಯಾಪ್ತಿಯಲ್ಲಿರುವ ಲೈಬ್ರರಿಯನ್ನು ಸರಿಯಾಗಿ ನಿರ್ವಹಿಸದೇ ಇರುವ ಬಗ್ಗೆ ಹಾಗೂ ಸದರಿ ಕಟ್ಟಡ ಶಿಥಿಲಗೊಂಡಿರುವ ಬಗ್ಗೆ ಮಾಹಿತಿ ನೀಡಿದರು. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮವಹಿಸುವುದರ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.

7) ಲೈಬ್ರರಿ ರಸ್ತೆಯಲ್ಲಿನ ಒಳಚರಂಡಿಯ ಪೈಪ್ ಒಡೆದು ಹೋಗಿ ಅಕ್ಕಪಕ್ಕದ ಸುಮಾರು 40 ಮನೆಗಳಿಗೆ ಕುಡಿಯುವ ನೀರು ಸರಬರಾಜು ಆಗುವ ಪೈಪ್‌ನೊಂದಿಗೆ ಕಲುಷಿತಗೊಂಡು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿದ್ದ ಬಿ.ಡಬ್ಲ್ಯು.ಎಸ್.ಎಸ್.ಬಿ ಅಭಿಯಂತರರವರು ಇದು ಓ ಅಂಡ್ ಎಂ ಮತ್ತು ವೇಸ್ಟ್ ವಾಟರ್ ಪ್ರಾಜೆಕ್ಟ್ ವ್ಯಾಪ್ತಿಯಲ್ಲಿ ಬರುವುದರಿಂದ ಸದರಿ ವಿಭಾಗದ ಅಭಿಯಂತರರವರನ್ನು ಸೂಕ್ತ ಕ್ರಮಕ್ಕಾಗಿ ಸಂಪರ್ಕಿಸಬೇಕೆಂದು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ವೇಸ್ಟ್ ವಾಟರ್ ಪ್ರಾಜೆಕ್ಟ್, ವಿಭಾಗದ ಕಾರ್ಯಪಾಲಕ ಅಭಿಯಂತರರೊಂದಿಗೆ ಸಭೆಯಲ್ಲಿಯೇ ನೋಡಲ್ ಅಧಿಕಾರಿಯವರು ದೂರವಾಣಿ ಮುಖಾಂತರ ಚರ್ಚಿಸಿ ತುರ್ತಾಗಿ ಕ್ರಮವಹಿಸಲು ಸೂಚಿಸಿದರು.

8) ಶ್ರೀ.ಕೃಷ್ಣಮೂರ್ತಿ ರವರು 4ನೇ ಹಂತದ 4ನೇ ಬಿ ಕ್ರಾಸ್‌ನಲ್ಲಿ ಬರುವ ದುರ್ಗಾ ಟೆಂಪಲ್ ಪಕ್ಕ ಯು.ಜಿ.ಡಿ. ಬ್ಲಾಕ್ ಆಗುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಬಿ.ಡಬ್ಲ್ಯು.ಎಸ್.ಎಸ್.ಬಿ ಅಭಿಯಂತರವರು ಸೂಕ್ತ ಕ್ರಮವಹಿಸುವುದಾಗಿ ಸಭೆಯಲ್ಲಿ ಮಾಹಿತಿ ನೀಡಿದರು.

9) ಶ್ರೀ.ವಿಶ್ವ ರವರು ಅಟ್ಟೂರು ಗ್ರಾಮ ವ್ಯಾಪ್ತಿಯಲ್ಲಿ ಬರುವ ಎಸ್.ಸಿ./ ಎಸ್.ಟಿ ಮನೆಗಳ ಪ್ರಗತಿಯ ಬಗ್ಗೆ ಮಾಹಿತಿ ಕೇಳಿದರು. ಇದಕ್ಕೆ ಸಂಬಂಧಿಸಿದಂತೆ ಪಾಲಿಕೆ ವತಿಯಿಂದ ಸುಮಾರು 6 ತಿಂಗಳಿಂದ ಇಲ್ಲಿಯವರೆಗೂ ಹಣಕಾಸು ಬಿಡುಗಡೆಯಾಗದೇ ಇರುವುದರಿಂದ ಎಸ್.ಸಿ./ಎಸ್.ಟಿ ಮನೆಗಳ ಪ್ರಗತಿಯು ಕುಂಠಿತವಾಗಿದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ಇನ್ನು ಮುಂದೆ ಪಾಲಿಕೆಯಿಂದ ಅನುದಾನ ಬಿಡುಗಡೆಯಾದ ನಂತರ ತ್ವರಿತವಾಗಿ ಎಸ್.ಸಿ./ಎಸ್.ಟಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಸಾರ್ವಜನಿಕರೊಂದಿಗೆ ಮುಕ್ತವಾಗಿ ಚರ್ಚಿಸಿ ಇಲ್ಲಿಯವರೆಗೂ ಹಾಜರಾಗದೇ ಇರುವ ಬಿ.ಬಿ.ಎಂ.ಪಿ.ಯ ವಿವಿಧ ವಿಭಾಗದ ಅಧಿಕಾರಿಗಳ ವಿರುದ್ದ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ವಿರುದ್ದ ಸೂಕ್ತ ಕ್ರಮವಹಿಸಲು ಮಾನ್ಯ ಗೌರವಾನ್ವಿತ ಆಡಳಿತಗಾರವರಿಗೆ ಹಾಗೂ ಮಾನ್ಯ ಆಯುಕ್ತರವರಿಗೆ ಇಲ್ಲಿಯವರೆಗೂ ಗೈರು ಹಾಜರಾಗಿರುವ ಅಧಿಕಾರಿಗಳ ಪಟ್ಟಿಯನ್ನು ಕಳುಹಿಸಿಕೊಡಲು ಸಭೆಯಲ್ಲಿ ತೀರ್ಮಾನಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡಲ್ ಅಧಿಕಾರಿ**
**ವಾರ್ಡ್ ನಂ:03, ಅಟ್ಟೂರು**
**ಯಲಹಂಕ ವಲಯ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**